**ಅಧ್ಯಕ್ಷರು :** ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ಬಗ್ಗೆ ಕ್ರಮ ಕೈಗೊಳ್ಳಲಿಕ್ಕೆ ಹೇಳಿ.

**9. ವಿಷಯ : ಬೆಳಗಾವಿಯ ನೇಕಾರಿಗೆ ಶೇಕಡಾ 4 ಹಾಗೂ 3ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸರಳೀಕರಣ ಹಾಗೂ ಬ್ಯಾಂಕುಗಳಿಗೆ ಬಡ್ಡಿ ಸಹಾಯ ಧನ ಮಂಜೂರಾತಿ ಮಾಡುವ ಬಗ್ಗೆ :**

**ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) :** ಬೆಳಗಾವಿಯ ನಗರದಲ್ಲಿ ನೇಕಾರರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶೇಕಡಾ 3ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸಹಾಯ ಧನ ಮಂಜೂರು ಮಾಡಿದ್ದಾರೆ. ಆದರೆ ಅದರ ಪೆಂಡಿಂಗ್ ಬಿಲ್ಸ್ ಬಂದಿಲ್ಲ. Belgaum Industrial Co-opeative Bank ಸುಮಾರು 87.00 ಲಕ್ಷ ರೂಪಾಯಿಗಳು, ಕರ್ನಾಟಕ ಇಂಡಸ್ಟ್ರಿಯಲ್ ಕೋ–ಆಪರರೇಟಿವ್ ಬ್ಯಾಂಕ್ 15.00 ಲಕ್ಷ ರೂಪಾಯಿಗಳು, ಗಾಯಿತ್ರಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ. 5.00 ಲಕ್ಷ ರೂಪಾಯಿಗಳು ಹೀಗೆ ಒಂದು ಕೋಟಿ ಏಳು ಲಕ್ಷ ರೂಪಾಯಿಗಳು ಬಾಕಿ ಸಹಾಯ ಧನ ಬರಬೇಕಾಗಿದೆ. ದಯಮಾಡಿ ಈ ಬ್ಯಾಂಕುಗಳು ಮುಚ್ಚುವ ಸ್ಥಿತಿಯಲ್ಲಿರುವುದರಿಂದ ಕೂಡಲೇ ಈಸಹಾಯಧನ ಬಿಡುಗಡೆಯಾಗಬೇಕು.

**ಅಧ್ಯಕ್ಷರು :** ಇದಕ್ಕೆ ಉತ್ತರ ಬಂದಿಲ್ಲ.

**ಶ್ರೀ ಗೂಳಿಹಟ್ಟಿ ಡಿ.ಶೇಖರ್ :** ಉತ್ತರ ಕರ್ನಾಟಕದಲ್ಲಿ ನೇಕಾರರ ಸಂಖ್ಯೆ ಜಾಸ್ತಿ ಇರುವುದು. At least ನಾವು ನೇಕಾರರ ಸಮಸ್ಯೆಗಳನ್ನು ಸಣ್ಣ ಪ್ರಮಾಣದಲ್ಲಿ ಬಗೆಹರಿಸಲಿಕ್ಕೆ ಅಗುವುದಿಲ್ಲವೆಂದರೆ ಹೇಗೆ ಅಧ್ಯಕ್ಷರೆ?

**ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) :** ಈಗ ಗೂಳಿಹಟ್ಟಿ ಶೇಖರ್‌ರವರು ನೇಕಾರರಿಗೆ ಬಡ್ಡಿ ದರದಲ್ಲಿ ಕೊಟ್ಟಿರುವ ಸಾಲ ವಿತರಣೆ, ಮಂಜೂರಾತಿಯ ಬಗ್ಗೆ ಕೇಳಿದ್ದೀರಿ, ಉತ್ತರವಿನ್ನೂ

ಲಭ್ಯವಾಗಿಲ್ಲ. ಹಾಗಾಗಿ ತಮಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುವಂಥ ಕೆಲಸ ಮಾಡುತ್ತೇನೆಂದರೆ ಹೇಳಬಯಸುತ್ತೇನೆ.

**ಅಧ್ಯಕ್ಷರು** : ಇದಕ್ಕೆ ಉತ್ತರವನ್ನು ಕಳುಹಿಸಿಕೊಡಬೇಕು.

**10. ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ತಾಲ್ಲೂಕಿನ ಸೋಮಪುರ ಹೋಬಳಿಯ, ಸುತ್ತಮುತ್ತಲ ಗ್ರಾಮಗಳ ರೈತರ ಕೃಷಿ ಭೂಮಿಯನ್ನು ಭೂಸ್ವಾಧೀನದಿಂದ ಕೈಬಿಡುವ ಬಗ್ಗೆ :**

**ಶ್ರೀ ಎಂ.ವಿ. ನಾಗರಾಜ್ (ನೆಲಮಂಗಲ)** : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಮಪುರ ಹೋಬಳಿಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ಕೈಗಾರಿಕೆಗಳಿಗೆ ಹೆಚ್ಚು ಜಾಗವನ್ನು ವಶಪಡಿಸಿ ಕೊಂಡಿದ್ದಾರೆ. ಅಲ್ಲಿನ ರೈತರಿಗೆ ಯಾವ ರೀತಿ ಹಣ ಪರಿಹಾರ ಕೊಡುತ್ತಾರೆ ಮತ್ತು ಅಲ್ಲಿ ಈ ಗ್ರಾಮಠಾಣಾಗೆ ಬರುವಂಥ ಜಾಗಗಳಲ್ಲಿ ಸಹ ಎಲ್ಲಾ acquire ಮಾಡಿಕೊಂಡಿದ್ದಾರೆ. ಈ ಬಗ್ಗೆ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)** : ಮಾನ್ಯ ಅಧ್ಯಕ್ಷರೆ,

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ವ್ಯಾಪ್ತಿಯಲ್ಲಿ ಕೆಐಎಡಿಬಿ ವತಿಯಿಂದ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಪ್ರಕರಣಗಳ ವಿವರ ಕೆಳಗಿನಂತಿದೆ.